①

**ದಿನಾಂಕ: 05.01.2019 ರಂದು 11-30 ಗಂಟೆಗೆ ಶ್ರೀಮತಿ ಮೀನಾಕ್ಷಿ ಲಕ್ಷ್ಮೀಪತಿ, ಬಿ.ಬಿ.ಎಂ.ಪಿ ಸದಸ್ಯರು ವಾರ್ಡ್-50 (ಬೆನ್ನಿಗಾನಹಳ್ಳಿ) ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾರ್ಡ್-50(ಬೆನ್ನಿಗಾನಹಳ್ಳಿ) ರಲ್ಲಿನ ಒಣ ಮತ್ತು ಹಸಿ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಸಂಬಂಧಿಸಿದಂತೆ WP 24739/2012 ರ ಉಚ್ಚ ನ್ಯಾಯಾಲಯದ ನಿರ್ದೇಶನವನ್ನು ಪಾಲಿಸುವ ಕುರಿತು.
2. ವಾಡ್-50ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ ರಸ್ತೆ ಕಾಮಗಾರಿಗಳ ಬಗ್ಗೆ ಚರ್ಚಿಸುವ ಕುರಿತು.
3. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

### : ಸಭೆಗೆ ಹಾಜರಾಗಿದ್ದವರ ವಿವರಗಳು :

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಹುದ್ದೆ | ದೂರವಾಣಿ ಸಂಖ್ಯೆ |
|---|---|---|---|
| 1 | ಮೀನಾಕ್ಷಿಲಕ್ಷ್ಮೀಪತಿ | ಅಧ್ಯಕ್ಷರು | 9845344522 |
| 2 | ಸಂಪತ್ ಕುಮಾರ್ | ಸದಸ್ಯರು | 9632253399 |
| 3 | ಸಿ.ನಾರಾಯಣಸ್ವಾಮಿ | ಸದಸ್ಯರು | 9535058878 |
| 4 | ಪ್ರಭಾ ಕೆ | ಸದಸ್ಯರು | |
| 5 | ಶೀಲ ಟಿ | ಸದಸ್ಯರು | 9011183036 |
| 6 | ವಿ ಜಯಲಕ್ಷ್ಮೀ | ಸದಸ್ಯರು | ಗೈರು ಹಾಜರು |
| 7 | ವಿಂದನ್ | ಸದಸ್ಯರು | 9343934327 |
| 8 | ಅಮರಾವತಿ ರವಿಚಂದ್ರ | ಸದಸ್ಯರು | 9035191713 |
| 9 | ಎಂ. ಆನಂದ್ | ಸದಸ್ಯರು | 9900979998 |
| 10 | ಬಿ.ಎಸ್ ಗೋವರ್ಧನ (ಗೋಪಿ) | ಸದಸ್ಯರು | 9066629805 |
| 11 | ಎನ್. ವೆಂಕಟೇಶ್ | ಸದಸ್ಯರು | ಗೈರು ಹಾಜರು |
| 12 | ಪ್ರಸನ್ನ ಕುಮಾರ್.ಪಿ | ಸದಸ್ಯ ಕಾರ್ಯದರ್ಶಿ | 9480683383 |
| 13 | | ಹಿ.ಆ.ಪ | ಗೈರು ಹಾಜರು |
| 14 | ಶ್ರೀ ಎನ್ ಲೋಕೇಶ್ | ಪೋಲೀಸ್ ಬೈಯ್ಯಪ್ಪನಹಳ್ಳಿ | |
| 14 | ನವೀನ್ | ಕಿ.ಆ.ಪ | 9060492959 |
| 15 | ಮೋಸಸ್ ಚೇತನ್ ವ್ಯಾಸ್ | ಕಂ.ಪ | 9980166619 |
| 16 | ಶ್ರೀಕಾಂತ್ | ಕಂ.ಪ | 8317400141 |
| 17 | ಕುಮಾರ್ | ಕಂ.ವ | 7019152866 |

## :ನಡಾವಳಿಯ ವರದಿ:

- ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಪಿ.ಪ್ರಸನ್ನ ಕುಮಾರ್ ರವರು ಮಾತನಾಡುತ್ತಾ ಸಭೆಗೆ ಹಾಜರಾದ ವಾರ್ಡ್ ಸಮಿತಿಯ ಮಾನ್ಯ ಅಧ್ಯಕ್ಷರು, ಸದಸ್ಯರು ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು. ನಂತರ ಸದಸ್ಯರೆಲ್ಲರೂ ತಮ್ಮ ಪರಿಚಯ ಮಾಡಿಕೊಂಡರು.

- ಸದಸ್ಯ ಕಾರ್ಯದರ್ಶಿಗಳು ಮಾತನಾಡುತ್ತಾ ಮಾನ್ಯ ನ್ಯಾಯಾಲಯವು ಆಯಾ ವಾರ್ಡಿನ ಕಸವನ್ನು ಆಯ್ದು ವಾರ್ಡಿನಲ್ಲಿಯೆ ನಿರ್ವಹಿಸುವಂತೆ ಮಾನ್ಯ ನ್ಯಾಯಾಲಯದ ಆದೇಶದಂತೆ ಪಾಲಿಸಬೇಕಾಗಿರುವುದರಿಂದ ವಾರ್ಡ್ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯ ಸಭೆಯನ್ನು ಕರೆಯಲಾಗಿದ್ದು, ಇನ್ನು ಮುಂದೆ ಸದಸ್ಯರೆಲ್ಲರೂ ಪ್ರತಿ ಸಭೆಗೆ ಹಾಜರಾಗುವಂತೆ ಕೋರಿದರು.

- ಮಾನ್ಯ ಅಧ್ಯಕ್ಷರು ಹಾಗೂ ಪಾಲಿಕೆಯ ಸದಸ್ಯರಾದ ಶ್ರೀಮತಿ ಮೀನಾಕ್ಷಿ ಲಕ್ಷ್ಮೀಪತಿ ರವರು ವಾರ್ಡ್ ಕಮಿಟಿಯ ಸದಸ್ಯರೆಲ್ಲರಿಗೂ ಸ್ವಾಗತವನ್ನು ಕೋರಿದರು. ನಂತರ ಮಾತನಾಡುತ್ತಾ ಗೌರವಾನ್ವಿತ ನ್ಯಾಯಾಲಯದ ಆದೇಶದಂತೆ ವಾರ್ಡ್‌ಗಳಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಈಗಾಗಲೇ ಪ್ರತಿ ಮಾಹೆಯ ಮೊದಲ ಶನಿವಾರದಂದು ನಡೆಸುತ್ತಿದ್ದು, ತಾವೆಲ್ಲರೂ ಈ ಸಭೆಗೆ ಹಾಜರಾಗಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಾ, ಈ ಕೆಳಕಂಡಂತೆ ಸಭೆಗೆ ಸೂಚನೆಗಳನ್ನು ನೀಡಿದರು.

  1) ವಾರ್ಡ್‌ನಲ್ಲಿನ ಕಸವನ್ನು ಸಾಗಿಸಲು ಹಾಲಿ ಇರುವ ಕಸದ ಗಾಡಿಗಳು ಕಡಿಮೆ ಇದ್ದು, ಹೆಚ್ಚುವರಿ ಗಾಡಿಗಳನ್ನು ಮತ್ತು ಕಸ ವಿಲೇವಾರಿ ಮಾಡುವ ಪರಿಕರಗಳನ್ನು ಒದಗಿಸಲು ಹಾಜರಿದ್ದ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

  2) ಹಸಿ ಕಸ ಮತ್ತು ಒಣ ತ್ಯಾಜ್ಯಗಳನ್ನು ಮನೆಯ ಹಂತದಲ್ಲಿಯೇ ವಿಂಗಡಿಸಿ, ಕಸದ ಗಾಡಿಗೆ ನೀಡುವ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿದರು.

  3) ಪೌರಕಾರ್ಮಿಕರು ಹಾಗೂ ಸಾರ್ವಜನಿಕರು ಕಸವನ್ನು ಅಲ್ಲಲ್ಲಿ ಸುರಿದು ಕಸಕ್ಕೆ ಬೆಂಕಿ ಹಚ್ಚಿ ವಾತಾವರಣವನ್ನು ಕಲುಷಿತ ಮಾಡುತ್ತಿರುವುದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

  4) ವಾರ್ಡ್‌ನಲ್ಲಿ ಕಸ ವಿಲೇವಾರಿ ಮಾಡಿ ಸ್ವಚ್ಛಗೊಳಿಸುವ ಸಿಬ್ಬಂಧಿಗಳ ಸಂಖ್ಯೆ ಕಡಿಮೆ ಇದ್ದು, ಹೆಚ್ಚುವರಿಯಾಗಿ 30 ಮಂದಿ ಪೌರಕಾರ್ಮಿಕರನ್ನು ನೇಮಿಸಿಕೊಳ್ಳಲು ಪ್ರಸ್ತಾವನೆ ಸಲ್ಲಿಸಲು ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

5) ವಾರ್ಡ್‌ನಲ್ಲಿ ಒಂದು ಬಾರಿ ಸ್ವಚ್ಛಗೊಳಿಸಿದ ನಂತರ ಸಾರ್ವಜನಿಕರು ಪುನಃ ಕಸವನ್ನು ತಂದು ಸುರಿಯುತ್ತಿರುವುದರ ಬಗ್ಗೆ ಗಮನ ಸೆಳೆಯುತ್ತ, ಅಂತಹ ಸಾರ್ವಜನಿಕರಿಗೆ ಸ್ಥಳದಲ್ಲಿಯೇ ದಂಡವನ್ನು ವಿಧಿಸಿ, ಸದರಿಯವರ ವಿರುದ್ಧ ಎಫ್.ಐ.ಆರ್. ದಾಖಲಿಸಲು ಸೂಚಿಸಿದರು.

**ಕ್ರಮ:- ಮೇಲ್ಕಂಡ ಅಂಶ 1 ರಿಂದ 5ರವರೆಗಿನ ವಿಷಯಗಳನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ಸಿ.ವಿ.ರಾಮನ್‌ನಗರ ರವರಿಗೆ ಕಳುಹಿಸುತ್ತಾ ಕೂಡಲೇ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಮುಂದಿನ ಸಭೆಯಲ್ಲಿ ಪ್ರಗತಿಯ ವರದಿ ಮತ್ತು ದಾಖಲೆಗಳೊಂದಿಗೆ ಹಾಜರಾಗಲು ತಿಳಿಸಲಾಗಿದೆ.**

- ಅದರಂತೆಯೇ ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ, ಈ ಕೆಳಕಂಡ ದೂರುಗಳನ್ನು ವಾರ್ಡ್ ಸಮಿತಿಯ ಸದಸ್ಯರು ಪ್ರಸ್ತಾಪ ಮಾಡಿರುತ್ತಾರೆ.

1) ವಾರ್ಡ್‌ನಲ್ಲಿ ಕೆಲವು ಮಂದಿ ಬೈಕ್ ವೀಲಿಂಗ್ ಹಾಗೂ ಎದ್ವತದ್ವ ವಾಹನಗಳನ್ನು ಚಲಾಯಿಸಿ, ಸಾರ್ವಜನಿಕರಿಗೆ ತೊಂದರೆಯುಂಟು ಮಾಡುತ್ತಿದ್ದು, ಇದರಿಂದ ಸಾರ್ವಜನಿಕರು ಭಯಭೀತರಾಗಿರುತ್ತಾರೆ.

2) ಕೆಲವು ಮಂದಿ ಯುವಕರು ಉದ್ಯಾನದಲ್ಲಿ ಮತ್ತು ಸಾರ್ವಜನಿಕ ರಸ್ತೆಗಳಲ್ಲಿ ಇತ್ಯಾದಿ ಮಾದಕ ಪದಾರ್ಥಗಳನ್ನು ಸೇವಿಸಿ ಸಾರ್ವಜನಿಕರಿಗೆ ತೊಂದರೆಯುಂಟು ಮಾಡುತ್ತಿದ್ದು, ಕೆಲಸಗಳನ್ನು ಮುಗಿಸಿಕೊಂಡು ಬರುವ ಕಾರ್ಮಿಕರಿಂದ ಹಣ ವಸೂಲಾತಿ ಮಾಡುತ್ತಿದ್ದಾರೆಂದು ದೂರು ಇರುತ್ತದೆ.

**ಕ್ರಮ:- ಈ ಬಗ್ಗೆ ಶ್ರೀ ಎನ್. ಲೋಕೇಶ್, ಪೊಲೀಸ್ ಠಾಣೆ, ಬೈಯ್ಯಪ್ಪನಹಳ್ಳಿ, ರವರು ಮಾತನಾಡುತ್ತಾ, ಮೇಲ್ಕಂಡ ಎಲ್ಲಾ ವಿಷಯಗಳ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದ್ದು, ಹಲವು ಮಂದಿಯನ್ನು ವಶಕ್ಕೆ ಪಡೆದು ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಮತ್ತು ಇನ್ನು ಮುಂದೆಯು ಸಹ ವಾರ್ಡ್‌ನಲ್ಲಿ ಯಾವುದೇ ರೀತಿಯ ಅಪರಾಧಿ ಚಟುವಟಿಕೆಗಳು ನಡೆಯದಂತೆ ಬಂದೋಬಸ್ತ್ ವ್ಯವಸ್ಥೆಯನು ಏರ್ಪಡಿಸಲಾಗಿದೆಯೆಂದು ತಿಳಿಸಿದ್ದು, ಈ ಬಗ್ಗೆ ಕ್ರಮಕೈಗೊಂಡಿರುವ ಪ್ರಗತಿಯ ವರದಿ ಮತ್ತು ದಾಖಲೆಗಳೊಂದಿಗೆ ಮುಂದಿನ ಸಭೆಯಲ್ಲಿ ಹಾಜರಾಗಲು ಪೊಲೀಸ್‌ಠಾಣೆ, ಬೈಯ್ಯಪ್ಪನಹಳ್ಳಿ ಮತ್ತು ರಾಮಮೂರ್ತಿನಗರ, ಬಾಣಸವಾಡಿ ರವರಿಗೆ ಕೋರಲಾಗಿದೆ.**

1) ಸಂಚಾರ ಪೊಲೀಸ್ ಠಾಣೆಗೆ ಸಂಬಂಧಿಸಿದಂತೆ, ವರ್ತುಲ ಮುಖ್ಯರಸ್ತೆಯಿಂದ ಕಸ್ತೂರಿನಗರಕ್ಕೆ ಬಲ ತಿರುವು ಪಡೆಯಲು ಸಿಗ್ನಲ್ ದೀಪಗಳ ವ್ಯವಸ್ಥೆಯನ್ನು ನಿಧಾನವಾಗಿ ಮಾಡುತ್ತಿದ್ದು, ಕನಿಷ್ಠ 15 ನಿಮಿಷಗಳ ಹೆಚ್ಚು ಕಾಲ ವಿಳಂಬವಾಗುತ್ತಿದ್ದು, ಇದನ್ನು ಸರಿಪಡಿಸಲು ಕೋರಿದರು.

2) ಕೆಲವು ಮಂದಿ ಯುವಕರು ಹಳೇ ಮದ್ರಾಸ್ ರಸ್ತೆಯಲ್ಲಿ ವಾಹನಗಳನ್ನು ವೇಗವಾಗಿ ಚಲಿಸುವುದರಿಂದ ಮಕ್ಕಳು ಮತ್ತು ಹಿರಿಯ ನಾಗರೀಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಇಲ್ಲಿ ಸಿಗ್ನಲ್ ಸಂಚಾರಿ ದೀಪಗಳು ಮತ್ತು ಸಂಚಾರಿ ಪೊಲೀಸ್ ಸಿಬ್ಬಂಧಿಗಳನ್ನು ನಿಯೋಜಿಸಲು ಕೋರಿದರು.

**ಕ್ರಮ:– ಈ ಬಗ್ಗೆ ಸೂಕ್ತ ಕ್ರಮಕೈಗೊಂಡಿರುವ ಬಗ್ಗೆ ಪ್ರಗತಿಯ ವರದಿ ಮತ್ತು ದಾಖಲೆಗಳೊಂದಿಗೆ ಮುಂದಿನ ಸಭೆಯಲ್ಲಿ ಹಾಜರಾಗಲು ಸಂಚಾರಿ ಪೊಲೀಸ್‌ಠಾಣೆ, ಬೈಯ್ಯಪ್ಪನಹಳ್ಳಿ ಮತ್ತು ರಾಮಮೂರ್ತಿನಗರ, ಬಾಣಸವಾಡಿ ರವರಿಗೆ ಕೋರಲಾಗಿದೆ.**

1) ವಾರ್ಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ರಸ್ತೆಗಳನ್ನು ಅಗೆದು ಪೈಪ್‌ಗಳನ್ನು ಅಳವಡಿಸುತ್ತಿದ್ದು, ಇದರಿಂದಾಗಿ ರಸ್ತೆ ವಿರೂಪಗೊಂಡು ಧೂಳಿನ ಸಮಸ್ಯೆ ಉಂಟಾಗಿರುವ ಬಗ್ಗೆ ದೂರಿದರು.

**ಕ್ರಮ:– ಮೇಲ್ಕಂಡ ಅಂಶದ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಕಾಮಗಾರಿ) ಸಿ.ವಿ.ರಾಮನ್‌ನಗರ ರವರಿಗೆ ಕಳುಹಿಸುತ್ತಾ ಕೂಡಲೇ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಮುಂದಿನ ಸಭೆಯಲ್ಲಿ ಪ್ರಗತಿಯ ವರದಿ ಮತ್ತು ದಾಖಲೆಗಳೊಂದಿಗೆ ಹಾಜರಾಗಲು ತಿಳಿಸಲಾಗಿದೆ.**

- ಮಾನ್ಯ ಅಧ್ಯಕ್ಷರು, ವಾರ್ಡ್‌ನಲ್ಲಿನ ಸಾರ್ವಜನಿಕರಿಗೆ ಪಾಲಿಕೆಯ ಕಲ್ಯಾಣ ಇಲಾಖೆಯಿಂದ ನೀಡಲಾಗುವ ಹಲವಾರು ಸೌಲಭ್ಯಗಳ ಬಗ್ಗೆ ತಿಳಿಸುತ್ತಾ, ಪ್ರಸ್ತುತ ಸಾಲಿನಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಮಂಜೂರಾತಿಯಾಗಿದ್ದು ಅವರುಗಳಿಗೆ ಸದರಿ ಸೌಲಭ್ಯಗಳನ್ನು ವಿತರಿಸುವುದರ ಸಂಬಂಧ 2017–18ನೇ ಸಾಲಿನ ಪಟ್ಟಿಯನ್ನು ತಯಾರಿಸಲಾಗಿದ್ದು, ಅನುಮೋದನೆಯನ್ನು ಕೋರಿದರು.

| ಕ್ರ.ಸಂ. | ವಿವರಗಳು | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಆಟೋ ನೀಡುವುದು. | 1 |
| 2 | ಹಿಂದುಳಿದ ಜಾತಿಗಳಿಗೆ ಬೈಸಿಕಲ್ ನೀಡುವುದು | 6 |
| 3 | ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಬೈಸಿಕಲ್ ನೀಡುವುದು. | 4 |
| 4 | ಹಿಂದುಳಿದ ಜಾತಿಗಳಿಗೆ ಕಾರ್‌ಗಳನ್ನು ನೀಡುವುದು | 2 |
| 5 | ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಕಾರ್‌ಗಳನ್ನು ನೀಡುವುದು. | 3 |
| 6 | ಹಿಂದುಳಿದ ಜಾತಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ನೀಡುವುದು | 2 |
| 7 | ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಲ್ಯಾಪ್‌ಟಾಪ್‌ಗಳನ್ನು ನೀಡುವುದು. | 6 |
| 8 | ವಿಕಲಚೇತನರಿಗೆ ವಾಹನ ನೀಡುವುದು | 1 |
| 9 | ಹಿಂದುಳಿದ ಜಾತಿಗಳಿಗೆ ಟೈಲರಿಂಗ್ ಮಿಷನ್‌ಗಳನ್ನು ನೀಡುವುದು | 17 |
| 10 | ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಟೈಲರಿಂಗ್ ಮಿಷನ್‌ಗಳನ್ನು ನೀಡುವುದು. | 24 |

5

- ಮೇಲ್ಕಂಡ ಪಟ್ಟಿಗೆ ಮಾನ್ಯ ಅಧ್ಯಕ್ಷರು ಎಲ್ಲಾ ಸದಸ್ಯರ ಒಪ್ಪಿಗೆ ಪಡೆದು ಅನುಮೋದಿಸಿದ್ದು, ಈ ಸಭೆಯು ಸುಗಮವಾಗಿ ನಡೆಯಲು ಸಹಕರಿಸಿದ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಗಳನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಬೆಳಿಗ್ಗೆ 11.30 ಘಂಟೆಗೆ ಇದೇ ರೀತಿಯಾಗಿ ಮಾಸಿಕ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು.

- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಕಂದಾಯ ಅಧಿಕಾರಿಯಾದ (ಸಿ.ವಿ.ರಾಮನ್ ನಗರ) ಉಪವಿಭಾಗದ ಶ್ರೀ ಪಿ.ಪ್ರಸನ್ನ ಕುಮಾರ್ ರವರು ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಮೀನಾಕ್ಷಿ ಲಕ್ಷ್ಮೀಪತಿ)**
**ಪಾಲಿಕೆ ಸದಸ್ಯರು ವಾರ್ಡ್–50 (ಬೆನ್ನಿಗಾನಹಳ್ಳಿ)**
**ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು**

P. [signature] 5/1/2019

**ಸದಸ್ಯ ಕಾರ್ಯದರ್ಶಿ–ವಾರ್ಡ್ 50 ಹಾಗೂ**
**ಸಹಾಯಕ ಕಂದಾಯ ಅಧಿಕಾರಿ,**
**ಸಿ.ವಿ.ರಾಮನ್ ನಗರ ಉಪವಿಭಾಗ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

<u>ಪ್ರತಿಯನ್ನು:</u>

1. ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಮಂಡಿಸಿದೆ.
2. ಜಂಟಿ ಆಯುಕ್ತರು, (ಪೂರ್ವ), ಉಪ ಆಯುಕ್ತರು(ಪೂರ್ವ) ರವರ ಅವಗಾಹನೆಗೆ ಮಂಡಿಸಿದೆ.
3. ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಮಂಡಿಸಿದೆ.
4. ಕಾ.ಪಾ.ಅ (ಸಿ.ವಿ.ರಾಮನ್ ನಗರ) ರವರ ಮಾಹಿತಿಗಾಗಿ.
5. ವಾರ್ಡ್ 50 ರ ಸಮಿತಿಯ ಸದಸ್ಯರು ರವರಿಗೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಂದಾಯ ಅಧಿಕಾರಿ, ಸಿ.ವಿ.ರಾಮನ್‌ನಗರ ಉಪವಿಭಾಗ ರವರ ಕಛೇರಿ

ಮಾದವ ಮೊದಲಿಯಾರ್ ರಸ್ತೆ, ಪಾಲಿಕೆಯ ಹೆರಿಗೆ ಆಸ್ಪತ್ರೆ ಎದುರು, ಕಾಕ್ಸ್‌ಟೌನ್,ಬೆಂಗಳೂರು-560005,ದೂ:080-22975843.

---

ಸಂಖ್ಯೆ:ಸ.ಕಂ.ಅ (ಸಿ.ವಿ.ರಾ.ನ-ಉ.ವಿ.)ವಾರ್ಡ್-50 ಸಮಿತಿ ಸಭೆ/ಜನವರಿ/2018-19 ದಿನಾಂಕ:27/12/2018

(+) ಸಹಿ ಬಿಟ್ಟ.

## ವಾರ್ಡ್ ಸಮಿತಿ ಸಭಾ ತಿಳುವಳಿಕೆ ಪತ್ರ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜನವರಿ-2019ರ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 05.01.2019ರ ಮೊದಲ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಪಾಲಿಕೆ ಸದಸ್ಯರ ವಾರ್ಡ್ ಕಛೇರಿ, ವಾರ್ಡ್ ಸಂಖ್ಯೆ:50ರಲ್ಲಿ ಹಮ್ಮಿಕೊಳ್ಳಲಾಗಿದ್ದು, ವಾರ್ಡ್ ಸಮಿತಿಯ ಗೌರವಾನ್ವಿತ ಅಧ್ಯಕ್ಷರಾದ ಶ್ರೀಮತಿ ಮೀನಾಕ್ಷಿ ಲಕ್ಷ್ಮೀಪತಿ- ವಾರ್ಡ್ 50ರ ಪಾಲಿಕೆ ಸದಸ್ಯರು ರವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಕೆಳಕಂಡ ಎಲ್ಲಾ ವಾರ್ಡ್ ಸಮಿತಿಯ ಸದಸ್ಯರು ಮತ್ತು ಕೆಳಕಂಡ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಹಾಜರಾಗಲು ಈ ಮೂಲಕ ಕೋರಿದೆ.

**ಚರ್ಚಿಸುವ ವಿಷಯಗಳು:-**

1. ವಾರ್ಡ್-50 (ಬೆನ್ನಿಗಾನಹಳ್ಳಿ)ರಲ್ಲಿನ ಒಣ ಮತ್ತು ಹಸಿ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಸಂಬಂಧಿಸಿದಂತೆ WP 24739/2012ರ ಉಚ್ಚ ನ್ಯಾಯಾಲಯದ ನಿರ್ದೇಶನವನ್ನು ಪಾಲಿಸುವ ಕುರಿತು.
2. ವಾರ್ಡ್-50ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ ಚರ್ಚಿಸುವ ಕುರಿತು.
3. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಸಹಿ) 27/12/2018

ಸಹಾಯಕ ಕಂದಾಯ ಅಧಿಕಾರಿ ಹಾಗೂ
ಸದಸ್ಯ ಕಾರ್ಯದರ್ಶಿ ವಾರ್ಡ್-50ರ ಸಮಿತಿ
ಸಿ.ವಿ.ರಾಮನ್‌ನಗರ ಉಪ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ,

1. ಸಹಾಯಕ ಕಾರ್ಯಪಾಲಕ ಅಭಿಯಂತರರು & ಸಹಾಯಕ ಅಭಿಯಂತರರು, ಸಿ.ವಿ.ರಾಮನ್‌ನಗರ ಉಪವಿಭಾಗ, ಬಿ.ಬಿ.ಎಂ.ಪಿ. / ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ರವರುಗಳಿಗೆ ಸದರಿ ಸಭೆಗೆ ತಪ್ಪದೇ ಹಾಜರಾಗಲು ಕೋರಲಾಗಿದೆ.
2. ಆರೋಗ್ಯ ವೈದ್ಯಾಧಿಕಾರಿಗಳು, ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-50 ರವರುಗಳಿಗೆ ಸದರಿ ಸಭೆಗೆ ತಪ್ಪದೇ ಹಾಜರಾಗಲು ಕೋರಲಾಗಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ/ಜಲಮಂಡಳಿ ರವರುಗಳಿಗೆ ಸದರಿ ಸಭೆಗೆ ತಪ್ಪದೇ ಹಾಜರಾಗಲು ಕೋರಲಾಗಿದೆ.
4. ಪೊಲೀಸ್ ಇನ್ಸ್‌ಪೆಕ್ಟರ್, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ ವಿಭಾಗ ರವರುಗಳಿಗೆ ಸದರಿ ಸಭೆಗೆ ತಪ್ಪದೇ ಹಾಜರಾಗಲು ಕೋರಲಾಗಿದೆ.
5. ಸಂಬಂಧಪಟ್ಟ ವಾರ್ಡ್-50ರ ಕಂದಾಯ ಪರಿವೀಕ್ಷಕರು ಮತ್ತು ವಸೂಲಿಗಾರರಿಗೆ ಕಳುಹಿಸುತ್ತಾ, ಸದರಿ ಸಭಾ ತಿಳುವಳಿಕೆ ಪತ್ರವನ್ನು ಮೇಲ್ಕಂಡ ಎಲ್ಲರಿಗೂ ತಲುಪಿಸಿ ಸ್ವೀಕೃತಿಯನ್ನು ಈ ಕಛೇರಿಗೆ ನೀಡಲು ಹಾಗೂ ಸಭೆಯಲ್ಲಿ ಭಾಗವಹಿಸಲು ಸೂಚಿಸಲಾಗಿದೆ.

ಮು.ತಿ.ನೋ. . .

[illegible]

## WARD COMMITTEE

## EAST ZONE

### Ward No. and Name: 50 - BENNIGANAHALLI

| Sl. No. | Ward Committee Member Name & Address (Sri / Smt.) | Category | Designation |
|---|---|---|---|
| 01 | Meenakshi Lakshmipathy, No. 235/1, Krishna kutira, 3rd main road, krishnaiahna playa, Bangaluru-38 | Corporator | Chairman |
| 02 | Sampath kumar, No.24, 2nd main road, Benniganahalli, dooravani nagara post, Bangaluru-16 | Schedule Caste | Member |
| 03 | C.Narayanaswamy, No.180, 1st main road, krishnaiahna playa, Bangaluru north, Indranagara, Bangalore38. | Schedule Tribe | Member |
| 04 | Prabha.K. No. 9, Papaiah compound, lal bahaddur nagara, Bangalore north, kalyana nagara, Bangalore42. | Women | Member |
| 05 | Sheela.T. No.84, 2nd cross, Gajendra nagara, maruthi seva nagara, Bangalore33. | Women | Member |
| 06 | V.Jayalakshmi, No.01, L.block, B channasandra, Bangalore43. | Women | Member |
| 07 | Vindan, Chairman, Dr.Amedkar welfare association, No.134-D, hale byappana halli, Bangalore33. | Association | Member |
| 08 | Amaravathi ravichandra, Chairman, welfare ladies association, No. 18, 3rd main road, 3rd cross, C.V.Raman nagara, Benniganahalli, Bangalore. | Association | Member |
| 09 | M.Anand, smruddi bajane mane, B Channa sandrd, Bangalore43. | General | Member |
| 10 | B.S.Govardhana (Gopi) No. 150, Government school road, byappanahalli, Maruthi seva nagara, Bangalore33 | General | Member |
| 11 | N.Venkatesh, No.43, 2nd main, 4th cross, Krishnayana playa, Bangalore38. | General | Member |
| 12 | Assistant Revenue Officer, Ward No. 50 | | Secretary & Nodal Officer |

Commissioner
Bruhat Bangalore Mahanagara Palike